ಬಿಜಾಪುರ ಜಿಲ್ಲೆಯಲ್ಲಿರುವ ಇರುವ ಜೈವಾನಿಲ ಸ್ಥಾವರಗಳ ಕಾರ್ಯ ನಿರ್ವಹಣೆ ಬಗ್ಗೆ

೧೦೫೫. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ) ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮಂತ್ರಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜೈವಾನಿಲ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ?

ಆ) ಇದಕ್ಕೆ ಸಂಬಂಧಿಸಿದಂತೆ ಸ್ಥಗಿತಗೊಂಡ ಅನಿಲಯಂತ್ರಗಳ ದುರಸ್ತಿಗೊಸ್ಕರ ತಾಂತ್ರಿಕ ಸಿಬ್ಬಂದಿ ಇದೆಯೇ ?

ಇ) ಸ್ಥಗಿತಗೊಂಡ ಅನಿಲಯಂತ್ರಗಳ ಮೇಲೆ ತೆಗೆದುಕೊಂಡ ಸಾಲವನ್ನು ರೈತರಿಗೆ ಮನ್ನಾ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಈ) ಇಲ್ಲದಿದ್ದ ಪಕ್ಷದಲ್ಲಿ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).

ಅ) ೧೯೮೭ನೇ ಜನವರಿ ಅಂತ್ಯದವರೆಗೆ ೧೪೫೮ ಸ್ಥಾವರಗಳನ್ನು ನಿರ್ಮಿಸಲಾಗಿದೆ.

ಆ) ಇಲ್ಲ

ಇ) ಇಲ್ಲ

ಈ) ಭಾರತ ಸರ್ಕಾರದವರು ವಿಶೇಷವಾದ ಧನಸಹಾಯವನ್ನು ಪ್ರತಿ ಸ್ಥಾವರಕ್ಕೆ ರೂ. ೧೫೦೦-೦೦ ರಿಂದ ರೂ. ೨೫೦೦-೦೦ಗಳವರೆಗೆ ಸ್ಥಾವರಗಳ ಗಾತ್ರಕ್ಕೆ ಅನುಗುಣವಾಗಿ ಸ್ಥಾವರಗಳನ್ನು ದುರಸ್ತಿಪಡಿಸಲು ಫಲಾನುಭವಿಗಳಿಗೆ ಅವಕಾಶಮಾಡಲಾಗಿದೆ. ಮತ್ತು ಈ ಸವಲತ್ತನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

೧೨-೦೦ ಪಿ.ಎಂ.

ಗಮನ ಸೆಳೆಯುವ ಸೂಚನೆ

''ರಸ್ತಾ ರೋಕೊ'' ಚಳವಳಿ ಮತ್ತು ಹುಬ್ಬಳ್ಳಿ-ಧಾರವಾಡ ಮೇಯರ್ ಮಂತ್ತು ಕಾರ್ಪೊರೇಟರುಗಳ ದಸ್ತಗಿರಿ

†ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ಮತ್ತು ನಾಗರೀಕರು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ರಸ್ತೆ ರೋಕೋ ಚಳವಳಿ ನಡೆಸಿದ್ದರಿಂದ ಮೇಯರ್ ಮತ್ತು ಕಾರ್ಪೊರೇಟರ್‌ಗಳು ಸೇರಿ ಕೆಳ ಜನರನ್ನು ಬಂಧಿಸಿರುವ ಬಗ್ಗೆ ಮಾನ್ಯ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಸದರಿ ವಿಷಯದ ಬಗ್ಗೆ ನನ್ನ ಹೇಳಿಕೆ ಈರೀತಿ ಇದೆ.—

ಹುಬ್ಬಳ್ಳಿ-ಧಾರವಾಡ ನಗರದಲ್ಲಿಯ ನೀರು ಸರಬರಾಜು ಪರಿಸ್ಥಿತಿಯ ಬಗ್ಗೆ ದಿನಾಂಕ ೨೩-೧೦-೧೯೮೬ರಂದು ಮಾನ್ಯ ಮುಖ್ಯಮಂತ್ರಿಯವರು ಸಭೆ ನಡೆಸಿ ಪುನರಾವಲೋಕನ ಮಾಡಿದ್ದಾರೆ. ಈ ಸಭೆಯಲ್ಲಿ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಮೇಯರ್‌ರವರು ಮಹಾನಗರ ಪಾಲಿಕೆಯ ಅಧಿಕಾರಿಗಳೊಂದಿಗೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು, ಮಂಡಲಿಯ ಅಧಿಕಾರಿಗಳೊಂದಿಗೆ, ಧಾರವಾಡ ಜಿಲ್ಲಾಧಿಕಾರಿಯವರು ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ :—

೧) ಜಲಮೂಲ ಲಭ್ಯವಿರುವುದನ್ನು ಪರಿಗಣಿಸಿ ಹುಬ್ಬಳ್ಳಿ–ಧಾರವಾಡ ನಗರ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ತೋಡಿಸಲು ಅನುಕೂಲವಾಗುವಂತೆ ಕ.ನ.ನೀ.ಸ. ಮತ್ತು ಒ.ಚ. ಮಂಡಲಿಗೆ ಪ್ರಸ್ತುತ ವರ್ಷದಲ್ಲಿ ಯೋಜನಾಕಾರ್ಯಕ್ರಮಕ್ಕೆ ಒದಗಿಸಲಾದ ಹಣದಲ್ಲಿ ೧.೦೦ ಕೋಟಿ ರೂಪಾಯಿಗಳನ್ನು ದಿನಾಂಕ ೧೮–೧೧–೧೯೮೬ರಂದು ಬಿಡುಗಡೆ ಮಾಡಲಾಗಿದೆ.

೨) ಈ ರೀತಿ ಬಿಡುಗಡೆ ಮಾಡಿದ ಹಣವನ್ನು ಹುಬ್ಬಳ್ಳಿ–ಧಾರವಾಡ ನಗರ ಪಾಲಿಕೆಯು ನವೆಂಬರ್ ೧೯೮೬ರ ಕೊನೆಯವರೆಗೆ ೮೦.೦೦ ಲಕ್ಷ ರೂ. ಗಳನ್ನು ಮತ್ತು ಡಿಸೆಂಬರ್ ೧೯೮೬ರ ಕೊನೆಯವರೆಗೆ ೨೨.೦೦ ಲಕ್ಷ ರೂ. ಗಳನ್ನು ಕ.ನ.ನೀ.ಸ. ಮತ್ತು ಒ.ಚ. ಮಂಡಲಿಗೆ ತನ್ನ ಯೋಜನಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪಾವತಿ ಮಾಡಬೇಕೆಂದು ಸರ್ಕಾರದ ಆದೇಶ ಸಂಖ್ಯೆ. ವನೀಇ ೪೬ ಯಾಬಮ್ಸ್ ೬ಎಲ್ ೮೬ (ಭಾಗ) ದಿನಾಂಕ ೧೮–೧೧–೧೯೮೬ರಲ್ಲಿ ತಿಳಿಸಲಾಗಿದೆ.

೩) ಆದರೆ ಧಾರವಾಡ ಜಿಲ್ಲಾಧಿಕಾರಿಯವರು ನಡೆಸಿದ ದಿನಾಂಕ ೪–೧೨–೧೯೮೬ರ ಸಭೆಯಲ್ಲಿ ನಗರ ಪಾಲಿಕೆಯ ಮೇಯರು, ನಗರಪಾಲಿಕೆಯ ಅಧಿಕಾರಿಗಳು ಮತ್ತು ಕ.ನ.ನೀ.ಸ. ಮತ್ತು ಒ.ಚ. ಮಂಡಲಿ ಅಧಿಕಾರಿಗಳು ಪಾಲ್ಗೊಂಡಿದ್ದು, ನಗರ ಪಾಲಿಕೆಯು ಮೇಲೆ ಸಾಲದ ಭಾರ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ, ಕೊಳವೆ ಬಾವಿಗಳನ್ನು ತೋಡಿಸುವುದನ್ನು ಹಾಗೂ ಅವುಗಳನ್ನು ವಿದ್ಯುತ್ ಪಂಪುಗಳನ್ನು ಜೋಡಿಸುವ ಕಾರ್ಯ ೪೫.೦೦ ಲಕ್ಷ ರೂ. ಗಳಿಗೆ ಸೀಮಿತಗೊಳಿಸಬೇಕೆಂದು ನಿರ್ಧರಿಸಲಾಯಿತು. ಮೇಯರ್‌ರವರು ದಿನಾಂಕ ೧೮–೧೧–೧೯೮೬ರಂದು ಸರ್ಕಾರಕ್ಕೆ ಒಂದು ಪತ್ರ ಬರೆದು, ನಗರಪಾಲಿಕೆಯು ತೀರಿಸಬೇಕಾದ ಸಾಲದ ಭಾರ ಕಡಿಮೆ ಮಾಡಲು ಈ ಹಿಂದೆ ತಿಳಿಸಿದ ೨೭೫ ಕೊಳವೆ ಬಾವಿಗಳ ಬದಲಾಗಿ ೧೩೩ ಕೊಳವೆ ಬಾವಿಗಳನ್ನು ಪ್ರಥಮವಾಗಿ ಕೊರೆಯಬೇಕೆಂದು ಮತ್ತು ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣದಲ್ಲಿ ಶೇ. ೪೫ ಭಾಗ ಮಾತ್ರ ಉಪಯೋಗಿಸಬೇಕೆಂದೂ ಕೋರಿದ್ದಾರೆ.

ಆ ಪ್ರಕಾರ ತತ್‌ಕ್ಷಣದಿಂದಲೇ ಮಂಡಲಿಯು ಕೊಳವೆ ಬಾವಿಗಳನ್ನು ಕೊರೆಯಲು ಅವಶ್ಯಕ ಕ್ರಮಗಳನ್ನು ತೆಗೆದುಕೊಂಡಿತು ಮತ್ತು ಜನವರಿ, ೧೯೮೭ರ ಕೊನೆಯವರೆಗೆ ೧೧೭ ಕೊಳವೆ ಬಾವಿಗಳನ್ನು ತೋಡಿದ್ದು ಅವುಗಳಲ್ಲಿ ೮೯ನ್ನು ಹುಬ್ಬಳ್ಳಿಯಲ್ಲಿಯೂ ಮತ್ತು ೨೮ನ್ನು ಧಾರವಾಡದಲ್ಲಿಯೂ ಕೊರೆದಿದ್ದಾರೆ. ಮತ್ತು ೫೪ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಜೋಡಿಸಿದ್ದು ೧೬ ಕೊಳವೆ ಬಾವಿಗಳಿಗೆ ವಿದ್ಯುತ್‌ಚಾಲಿತ ಪಂಪುಗಳನ್ನು ಜೋಡಿಸಿದೆ. ಇದಕ್ಕಾಗಿ ಮಂಡಲಿಯು ಫೆಬ್ರುವರಿ, ೧೯೮೭ರ ಕೊನೆಯವರೆಗೆ ೩೭.೫೦ ಲಕ್ಷ ರೂ. ಗಳನ್ನು ವೆಚ್ಚ ಮಾಡಿದ್ದು ನಗರ ಪಾಲಿಕೆಯು ೩೦.೦೦ ಲಕ್ಷ ರೂ. ಗಳನ್ನು ಪಾವತಿ ಮಾಡಿದೆ.

ಹುಬ್ಬಳ್ಳಿ–ಧಾರವಾಡ ನಗರಪಾಲಿಕೆಯ ಕಮೀಷನರು ದಿನಾಂಕ ೨೭–೨–೧೯೮೭ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ನಿರ್ವಾಹಕ ನಿರ್ದೇಶಕರವರಿಗೆ ಭೇಟಿ ಮಾಡಿ ಇನ್ನೂ ಹೆಚ್ಚಿನ ಕೊಳವೆ ಬಾವಿ ತೋಡಿದಂತೆ, ಆದರೆ ಈಗಾಗಲೇ ತೋಡಲಾದ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಜೋಡಿಸಲು ಮಂಡಲಿಯ ಕಾರ್ಯನಿರ್ವಾಹಕ ಅಭಿಯಂತರಿಗೆ ಸೂಚನೆ ನೀಡಬೇಕೆಂದು ಕೇಳಿಕೊಂಡಿದ್ದರು. ಆ ಪ್ರಕಾರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ನಿರ್ವಾಹಕ ನಿರ್ದೇಶಕರವರು ಕೈಪಂಪುಗಳನ್ನು ಜಿ.ಐ. ಪೈಪುಗಳನ್ನು ಮತ್ತು ಇತರ ಸಲಕರಣೆಗಳನ್ನು ಪಡೆದು ತೋಡಲಾದ ಕೊಳವೆ ಬಾವಿಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿವರೆಗೆ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ೧೨೦ ಕೊಳವೆ ಬಾವಿಗಳನ್ನು ತೋಡಿದ್ದಾರೆ. ಇನ್ನೂ ಉಳಿದ ೧೩ ಕೊಳವೆ ಬಾವಿಗಳನ್ನು ಕೂಡ ಕೊರೆದು ಮಾರ್ಚ್, ೧೯೮೭ರ ಕೊನೆಯವರೆಗೆ ಕೈಪಂಪುಗಳನ್ನು ಜೋಡಿಸಲಾಗುವುದು.

ದಿನಾಂಕ ೨–೩–೧೯೮೭ರ ಹುಬ್ಬಳ್ಳಿ–ಧಾರವಾಡ ನಗರ ಪಾಲಿಕೆಯ ಸಭೆಯಲ್ಲಿ ನಿಜ ಸಂಗತಿಯನ್ನು ತಿಳಿಸಲು ಆಯುಕ್ತರಿಗೆ ಅವಕಾಶ ಕೊಡದೆ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ :—

೧) ಹುಬ್ಬಳ್ಳಿ–ಧಾರವಾಡ ನಗರದಲ್ಲಿ ಕೊಳವೆ ಬಾವಿಗಳನ್ನು ತೋಡಿಸುವುದನ್ನು ನಿಲ್ಲಿಸುವುದಕ್ಕೆ ಸೂಚನೆ ನೀಡಿದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ನಿರ್ವಾಹಕ ನಿರ್ದೇಶಕರನ್ನು ಅಮಾನತ್ತಿನಲ್ಲಿಡಬೇಕು.

೨) ಬೆಂಗಳೂರಿನಲ್ಲಿರುವಂತೆ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ವ್ಯವಸ್ಥಿತ ನೀರು ಸರಬರಾಜು ಮಾಡಲು ಒಂದು ಪ್ರತ್ಯೇಕ ಮಂಡಲಿ ರಚಿಸುವುದು ಮತ್ತು ಮಂಡಲಿಯು ಕೊರೆದ ಬಾವಿಗಳು ಅದು ವರದಿ ಒಪ್ಪಿಸಿರುವಷ್ಟು ಆಳವಿರದೆ ಇರುವುದರಿಂದ, ಮರು ಪರಿಶೀಲಿಸುವುದು

೩) ನಗರ ಪಾಲಿಕೆಗೆ ಮಂಜೂರು ಮಾಡಿದ ಸಾಲ ಮನ್ನಾ ಮಾಡುವುದು.

ಮತ್ತು ಮೇಲ್ಕಾಣಿಸಿದ ಸಭೆಯಲ್ಲಿ ಸದಸ್ಯರು ಅಂದಿನ ದಿನವೇ ಚಳುವಳಿ ನಡೆಸುವಂತೆ ಮತ್ತು "ರಸ್ತೆ ರೋಕೋ" ನಡೆಸುವಂತೆ ನಿರ್ಣಯ ತೆಗೆದುಕೊಂಡರು.

ಕೊಳವೆ ಬಾವಿಗಳನ್ನು ತೋಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಬಿಡುಗಡೆ ಮಾಡಿದ ರೂ. ೧೦೦ ಲಕ್ಷ ಹಣವು ಸಣ್ಣ ಪಟ್ಟಣ ಪ್ರದೇಶಗಳಲ್ಲಿ ಕೊಳವೆ ನೀರು ಸರಬರಾಜು ಯೋಜನೆಗಳಿಗಾಗಿ ಮೀಸಲಾಗಿಟ್ಟ ಹಣವಾಗಿದ್ದು ತಾತ್ಕಾಲಿಕವಾಗಿ ಬಿಡುಗಡೆ ಮಾಡಲಾಗಿತ್ತು, ಸರ್ಕಾರದ ಆದೇಶದ ಪ್ರಕಾರ ನಗರಪಾಲಿಕೆಯು ಈ ಹಣವನ್ನು ತಕ್ಷಣವೆ ವಾಪಸ್ಸು ಮಾಡಬೇಕಾಗಿತ್ತು, ಹಾಗು ಇದರಿಂದ ಬೇರೆ ಕೆಲಸಗಳಿಗೆ ತೊಂದರೆಯಾಗುವ ಸಂಭವವಿರಲಿಲ್ಲ. ಮಂಡಲಿಯು ಕೂಡ ನಗರಪಾಲಿಕೆಯು ಕೇಳಿಕೊಂಡಂತೆ ಮಾತ್ರ ಕೆಲಸ ಸೀಮಿತಗೊಳಿಸಿದೆ. ಆದುದರಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ನಿರ್ವಾಹಕ ನಿರ್ದೇಶಕರು ಈ ಸಂಬಂಧದಲ್ಲಿ ಯಾವ ತಪ್ಪಿಲ್ಲ.

ಕಾರ್ಪೊರೇಟರ್‌ಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಹೆಚ್ಚಿನ ಕೊಳವೆ ಬಾವಿಗಳನ್ನು ತೋಡಿಸಲು ಆಗ್ರಹಪಡಿಸಿರುವುದಂತೆ, ಆದರೆ ಮಂಡಲಿಯು ಮೇಲೆ ತಿಳಿಸಿದಂತೆ ನಗರ ಪಾಲಿಕೆಯು ಕೇಳಿಕೊಂಡಷ್ಟು ಮಾತ್ರ ಕೆಲಸ ಸೀಮಿತಗೊಳಿಸಿದೆ. ಆದುದರಿಂದ ಕೆಲವು ಕಾರ್ಪೊರೇಟರ್‌ಗಳಿಗೆ ಅಸಮಾಧಾನ ಉಂಟಾಗಿದೆ. ಯಾವಾಗ ಅವರು ಚಳುವಳಿ ನಡೆಸಲು ಮತ್ತು ವಾಹನ ಚಲನವಲನ ತಡೆಯಲು ಪ್ರಯತ್ನಿಸಿದರೋ, ಆಗ ಅವರನ್ನು ಕರ್ನಾಟಕ ಪೋಲೀಸ್ ಕಾಯ್ದೆ ಕಲಮು ೭೧ರ ಪ್ರಕಾರ ಬಂಧಿಸಲಾಗಿದೆ, ಆಮೇಲೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಧಾರವಾಡ ಜಿಲ್ಲಾಧಿಕಾರಿಯವರು ಕೂಡ ಅವರನ್ನು ಭೇಟಿ ಮಾಡಿ ಸಮಂಜಸ ನೀರು ಸರಬರಾಜು ವ್ಯವಸ್ಥೆ ಮಾಡಿಸಲು ಆಶ್ವಾಸನೆ ನೀಡಿದ್ದಾರೆ.

ದಿನಾಂಕ ೨-೩-೧೯೮೭ರಂದು ಸಿಪಿಐ ಕಾರ್ಪೊರೇಟರ್‌ರಾದ ಶ್ರೀ ಎ. ಎಸ್. ಮುಧೋಳಕರವರ ನೇತೃತ್ವದಲ್ಲಿ ಕಾಂಗ್ರೆಸ್-ಐ, ಜನತಾ, ಬಿಜೆಪಿ ಮತ್ತು ಸ್ವತಂತ್ರ ಕಾರ್ಪೊರೇಟರ್‌ಗಳು ಮೆರವಣಿಗೆಯಲ್ಲಿ ಹೊರಟು ಹುಬ್ಬಳ್ಳಿಯ ಟ್ರಾಫಿಕ್ ಐಲಾಂಡ್ ಹತ್ತಿರ ಪ್ರತಿಭಟನೆಗಳನ್ನು ತಡೆದರು ಅವರುಗಳು ನಗರ ಪಾಲಿಕೆಯು ಪೂರ್ತಿ ಹಣ ಕೊಟ್ಟಾಗಲು ಮಂಡಲಿಯವರು ಕೊಳವೆ ಬಾವಿಗಳನ್ನು ತೋಡಿಸುವುದನ್ನು ನಿಲ್ಲಿಸಿದ್ದಾರೆಂದು ಆಪಾದಿಸಿದರೆಂದು ವರದಿಯಾಗಿದೆ. ಕರ್ನಾಟಕ ಪೋಲೀಸ್ ಕಾಯ್ದೆ ಕಲಮು ೭೧ರ ಪ್ರಕಾರ ೧೯ ಜನರನ್ನು ಬಂಧಿಸಲಾಯಿತು, ಅವರನ್ನು ೧೫ ನಿಮಿಷಗಳ ನಂತರ ಬಿಡಂಗಡೆ ಮಾಡಲಾಯಿತು. ಮೇಯರ್‌ರಾದ ಶ್ರೀ ಪಿ ಎಚ್. ಪವಾರ್‌ರವರ ನೇತೃತ್ವದಲ್ಲಿ ಬಿ.ಜೆ.ಪಿ. ಜನತಾ ಮತ್ತು ಸ್ವತಂತ್ರ ಕಾರ್ಪೊರೇಟರ್‌ಗಳು ಇನ್ನೊಂದು ಚಳುವಳಿ ನಡೆಸಿದರು. ಇವರಲ್ಲಿ ೨೪ ಜನರನ್ನು ಬಂಧಿಸಲಾಯಿತು ಮತ್ತು ಅವರನ್ನು ನಂತರ ಬಿಡುಗಡೆ ಮಾಡಲಾಯಿತು.

ಈಗ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪರಿಸ್ಥಿತಿಯು ಶಾಂತವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡದಲ್ಲಿ ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಿರುವುದರಲ್ಲಿ ಜನತಾ ಪಾರ್ಟಿಯವರೂ, ಕಾಂಗ್ರೆಸ್ ಪಾರ್ಟಿಯವರೂ, ಬಿಜೆಪಿಯವರೂ ಎಲ್ಲರೂ ಸೇರಿದ್ದಾರೆ. ಇವತ್ತು ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅನೇಕ ವರ್ಷಗಳಿಂದ ಅಲ್ಲಿನ ಜನ ಕೇಳುತ್ತಲೇ ಇದ್ದಾರೆ. ನನಗೆ ತಿಳಿದ ಮಟ್ಟಿಗೆ ಒಂದು ಕೋಟಿ, ಆರವತ್ತು ಗ್ಯಾಲನ್ ನೀರು ಇವತ್ತಿನ ದಿವಸ ಬೇಕಾಗುತ್ತದೆ ಇಲ್ಲಿಗೆ ಎರಡು ಮೂರು ಕಡೆಯಿಂದ ನೀರು ಬರತಕ್ಕಂಥ ಸೋರ್ಸ್ ಇದೆ ಘಟಪ್ರಭಾ, ಮಲಪ್ರಭಾ, ನೀರು ಸಾಗರ ಜಲಾಶಯಗಳಿಂದ ಒಂದು ಕೋಟಿ, ಆರವತ್ತು ಲಕ್ಷ ಗ್ಯಾಲನ್ ನೀರು ಬರುವುದಕ್ಕೆ ಅವಕಾಶ ಇದೆ. ಸರ್ಕಾರ ಇದರ ಬಗ್ಗೆ ಏನೇನೂ ಮಾಡಿಲ್ಲ. ನೀರು ಕೊಟ್ಟಿಲ್ಲ. ಅಲ್ಲಿನ ಕಾರ್ಪೊರೇಷನ್‌ನವರು ಹಣಕಾಸಿನ ಸಹಾಯ ಮನ್ನಾ ಮಾಡಿದ್ದಾರೆ. ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ನವರು ೩೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಸರ್ಕಾರದವರು ಒಂದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಒಂದು ಕೋಟಿ ರೂಪಾಯಿ ಕೊಡುವುದೂ

ಬಿಡುವುದೂ ವ್ಯವಹಾರ ಇದ್ದೇ ಇದೆ. ಕೊಳವೆ ಬಾವಿಗಳಿಂದ ಖಾಯಂ ನೀರು ಸಿಗುವಂಥ ಅನುಕೂಲ ಮಾಡಿಲ್ಲ. ೨೭೦ ಬೋರ್‌ವೆಲ್ ಹಾಕಬೇಕೆಂದು ಕೇಳಿದರೆ, ಕೇವಲ ೧೨೦ ಮಾತ್ರ ಹಾಕಿದ್ದಾರೆ, ಉಳಿದ ಬೋರ್‌ವೆಲ್‌ಗಳನ್ನು ಹಾಕಿಲ್ಲ. ತಾವೇ ತಪ್ಪು ಮಾಡಿ, ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಿದ್ದಾರೆ. ಮೂಲಭೂತವಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಚೇರ್ಮನ್ ಮತ್ತಿತರರು ತಪ್ಪು ತಿಳಿವಳಿಕೆಯನ್ನು ಕೊಟ್ಟಿದ್ದಾರೆ. ಈ ಪರಿಸ್ಥಿತಿ ಸರಿಯಾದುದೂ ಅಲ್ಲ. ಇದರ ಬಗ್ಗೆ ಸರ್ಕಾರ ಏನಂ ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಸಿ. ಬೈರೇಗೌಡ.—ಅಲ್ಲಿ ಇನ್ನೂ ಬಾಕಿ ಕೊಡಬೇಕಾಗಿದೆ....

ಶ್ರೀ ಎಂ. ಎಸ್. ಕೃಷ್ಣನ್.—ಬಾಕಿ ಕೊಡುತ್ತಾರೆ. ಬೆಂಗಳೂರಿನವರೂ ಬಾಕಿ ಕೊಡಬೇಕಂ. ಹಾಗಾದರೆ ಕೋಲಾರದವರು ಕೊಟ್ಟಿದ್ದಾರೆಯೇ ? ಇವತ್ತು ಅಲ್ಲಿ ನೀರು ನಿಲ್ಲಿಸಿ ಬಿಟ್ಟಿದ್ದಾರೆ. ಜನಕ್ಕೆ ನೀರಂ ಇಲ್ಲದೇ ಹೋದರೆ ಏನು ಮಾಡುವುದಕ್ಕಾಗುತ್ತದೆ ? ಸರ್ಕಾರದವರು ನೀರು ಕೊಡುವ ಕೆಲಸ ಮಾಡಬೇಕಂ. ಈ ರೀತಿ, ನೀರು ಇಲ್ಲದಂತೆ ಮಾಡಿರುವುದು ಸರಿಯಾದುದಲ್ಲ. ಇದಂ ಖಂಡನೀಯಂ ವಾದುದಂ. ಕಾರ್ಪೊರೇಷನ್‌ನವರು ಹಣ ಕೊಟ್ಟರೂ ಕೂಡ ಖಾಯಂ ನೀರಿನ ವ್ಯವಸ್ಥೆ ಮಾಡಿಲ್ಲ. ತಾತ್ಕಾಲಿಕವಾಗಿ ೨೭೦ ಬೋರ್‌ವೆಲ್ ಮಾಡುವ ಕಡೆ ೧೨೦ ಮಾಡಿ, ಮಂತ್ರಿ ಅರೆಸ್ಟ್ ಮಾಡಿದರು ಎಂದರೆ ಏನರ್ಥ. ಇದರ ಬಗ್ಗೆ ಸರ್ಕಾರ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದು ನಮಗೆ ಗೊತ್ತಾಗಬೇಕಾಗಿದೆ. ಜಿಲ್ಲಾಧಿಕಾರಿಗಳೂ ಕೂಡ ಭೇಟಿ ಮಾಡಿ, ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆ ಮಾಡಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದುದರಿಂದ ಯಾವಾಗ ನೀರು ಕೊಡಿಸುತ್ತೀರಿ ? ಇಂತಿಂಥ ಓಣಿಯಲ್ಲಿ ನೀರು ನಿಲ್ಲಿಸಿದ್ದಾರೆ ಎಂದು ಶ್ರೀಮಾನ್ ಮಂಥೋಳ್‌ರವರು ನನಗೆ ಪತ್ರ ಬರೆದಿದ್ದಾರೆ. ಕೆಲವು ಮಂಖ್ಯೆ ಸ್ಥಳಗಳಲ್ಲೂ ನೀರನ್ನು ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ. ರಾಜ್ಯ ಸರ್ಕಾರದವರಂ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರೂ ಸಹ, ಕೊಳವೆ ಬಾವಿಗಳನ್ನು ತೋಡದೆ ಏಕೆ ನಿಲ್ಲಿಸಿದರು ? ಇನ್ನೂ ಹಾಕಬೇಕಾಗಿ ಉಳಿದಿರತಕ್ಕ ೧೫೦ ಕೊಳವೆ ಬಾವಿಗಳನ್ನು ತಕ್ಷಣ ಹಾಕುವುದಕ್ಕೆ ಆದೇಶ ಕೊಡುತ್ತೀರಾ ? ಇದು ಒಂದನೆಯದು. ಎರಡನೆಯದು, ಈ ಸಮಸ್ಯೆಗೆ ಪರ್ಮನೆಂಟ್ ಸಲ್ಯೂಷನ್ ಏನು ಇದೆ, ಆ ಸಲ್ಯೂಷನ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ ? ಇನ್ನೂ ಮಂದಿಂದ ಕಾರ್ಪೊರೇಷನ್‌ನವರು ಮತ್ತು ಜಲ ಮಂಡಳಿಯವರು ತಮ್ಮ ತಮ್ಮಲ್ಲಿ ಯಾವುದೇ ತಕರಾರು ಬಂದರೆ ತಕ್ಷಣ ಸಾಮರಸ್ಯವಾಗಿ ಬಗೆಹರಿಸುವುದಕ್ಕೆ ಮತ್ತು ಅವರಲ್ಲಿರುವ ಸಮಸ್ಯೆಗಳನ್ನು ಇತ್ಯರ್ಥ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಧಾರವಾಡ ನಗರಸಭೆಯ ನೀರಿನ ವಿಷಯದಲ್ಲಿ ಹೊಗೂ ಅಂದು ಪಡೆದಂಥ ಬಂದ್ ವಿಷಯದಲ್ಲಿ ತಮ್ಮ ಹೇಳಿಕೆಯನ್ನು ಸಂದರ್ಭವಾಗಿ ಕೊಟ್ಟಿದ್ದಾರೆ. ಅವರ ಗಮನಕ್ಕೆ ತರುವ ವಿಷಯದಲ್ಲಿ ಹೇಳುವುದಾದರೆ, ಮಾನ್ಯ ಬೊಮ್ಮಾಯಿಯವರು ಚುನಾವಣೆಯಲ್ಲಿ ಆಯ್ಕೆಯಾಗುವುದಕ್ಕೆ ಮೊದಲು, ಹುಬ್ಬಳ್ಳಿ ಧಾರವಾಡ ನಗರಗಳಿಗೆ ನೀರನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಹೇಳಿದರು. ಅದನ್ನು ನಂಬಿ ಅಲ್ಲಿನ ಜನರು ಅವರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಈ ಸಮಸ್ಯೆಯನ್ನು ಪೂರ್ಣ ಮಾಡುವಂಥ ಅಧಿಕಾರ ಈಗ ಮಾನ್ಯ ಲಕ್ಷ್ಮೀಸಾಗರ್ ಅವರ ಕೈಯಲ್ಲಿ ಇದೆ. ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿದಾಗ ಅವರು ಧಾರವಾಡ ಹುಬ್ಬಳ್ಳಿ ನಗರಕ್ಕೆ ನೀರು ಕೊಡುವುದಕ್ಕೆ ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳನ್ನು ಕೊಡಲಾಗುತ್ತದೆಂದೂ ವಚನ ಕೊಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಹಣ ಬಂಜೂರು ಮಾಡಿದ್ದಾರೆಂದೂ ಮಾನ್ಯ ಮಂಖ್ಯ ಮಂತ್ರಿಗಳಿಗೂ ಹಾಗೂ ಬೊಮ್ಮಾಯಿಯವರಿಗೂ ಜನರು ಶಹಭಾಸ್‌ಗಿರಿಯನ್ನು ಕೊಟ್ಟಿದ್ದರು. ಒಂದು ಕೋಟಿ ರೂಪಾಯಿಯಲ್ಲಿ ೩೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೧೩೦ ಕೊಳವೆ ಬಾವಿಗಳನ್ನು ಮಾತ್ರ ತೆಗೆಸಿದ್ದಾರೆ. ಇನ್ನು ಉಳಿದ ಹಣವನ್ನು ಬಿಡುಗಡೆ ಮಾಡಲಿಲ್ಲ ಹಾಗೂ ಕೆಲಸವನ್ನು ಪೂರೈಸಲಿಲ್ಲ. ಅಲ್ಲಿನ ಜಲ ಮಂಡಳಿಯವರನ್ನು ಕೇಳಿದರೆ, ಸರ್ಕಾರದಿಂದ ನಮಗೆ ಹಣ ಬಂದಿಲ್ಲವಾದ್ದರಿಂದ ನಾವು ಏನೂ ಮಾಡುವ ಹಾಗಿಲ್ಲವೆಂದು ಹೇಳುತ್ತಾರೆ. ಇನ್ನು ಎರಡನೆಯದಾಗಿ ತಮ್ಮಲ್ಲಿ ಹೇಳುವುದೇನೆಂದರೆ, ತಾವು ಪ್ರಜಾಪ್ರಭುತ್ವವಾದಿಗಳಂ. ಮೊನ್ನೆ ಸಹಿತ ಹೇಳಿದ್ದೀರಿ, ಎಲೆಕ್ಟೆಡ್ ಮೆಂಬರ್‌ಗಳನ್ನು ಪೋಲೀಸಿನವರು ಹಿಡಿಯಂವುದು ಮತ್ತೊಂದಂ ಮಾಡುವುದಂ ಬೇಡ ಎಂದು. ಆದರೂ ಇವತ್ತಿನ ದಿವಸ ಧಾರವಾಡ

ಮತ್ತು ಹುಬ್ಬಳ್ಳಿ ನಗರ ಸಭೆಯ ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಿಸಲಾಗಿದೆ. ಈ ಬಾರಿ ಎಲ್ಲಾ ಪಕ್ಷದವರು, ಅಂದರೆ, ಜನತಾ ಪಕ್ಷದ ಕಾರ್ಪೊರೇಟರುಗಳು, ಕಾಂಗ್ರೆಸ್ (ಐ)ನ ಕಾರ್ಪೊರೇಟರುಗಳು, ಸಿ.ಪಿ.ಎಂ. ಕಾರ್ಪೊರೇಟರುಗಳು ಹಾಗೂ ಎಲ್ಲಾ ಕಾರ್ಪೊರೇಟರುಗಳು ಒಟ್ಟು ಸೇರಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳುತ್ತಿದ್ದಾರೆ, ಹಾಗೂ ಬಂದ್ ಆಚರಿಸುತ್ತಿದ್ದಾರೆ. ಇದು ಕುಡಿಯುವ ನೀರಿನ ಸಮಸ್ಯೆಯಾಗಿರುವುದರಿಂದ ಎಲ್ಲರೂ ಪಕ್ಷಭೇದ ಮರೆತು ಚಳುವಳಿ ಮಾಡುತ್ತಿದ್ದಾರೆ. ಬೆಂಗಳೂರು ನಗರವನ್ನು ಬಿಟ್ಟರೆ ಇಡೀ ಕರ್ನಾಟಕದಲ್ಲಿ ಹುಬ್ಬಳ್ಳಿ-ಧಾರವಾಡ ದೊಡ್ಡ ನಗರವಾಗಿದೆ. ಇಷ್ಟು ದೊಡ್ಡ ನಗರಕ್ಕೆ ನೀವು ನೀರು ಸರಬರಾಜು ಸರಿಯಾಗಿ ಮಾಡುವುದಿಲ್ಲ ವೆಂದರೆ ಹೇಗೆ? ಬೆಂಗಳೂರು ನಗರದಲ್ಲಿ ಇಷ್ಟೊಂದು ನೀರಿನ ಸಮಸ್ಯೆ ಇದ್ದರೂ ಸಹಿತ ನೀರಿನ ಸರಬರಾಜನ್ನು ಎಂದೂ ಬಂದ್ ಮಾಡಿಲ್ಲ. ಆದೇ ರೀತಿ ಧಾರವಾಡ ಮತ್ತು ಹುಬ್ಬಳ್ಳಿ ನಗರಗಳಿಗೂ ನೀರು ಸರಬರಾಜನ್ನು ಮಾಡಬೇಕು. ದಯವಿಟ್ಟು ಇದರ ಬಗ್ಗೆ ಒಳಚರಂಡಿ ಮಂಡಳಿಯ ಕಮಿಟಿಗೆ ಒಂದು ಆದೇಶವನ್ನು ಕೊಟ್ಟು ಯಾವ ರೀತಿ ಪ್ಲಾನ್ ಮಾಡಬೇಕೋ ಆ ರೀತಿ ಪ್ಲಾನ್ ಮಾಡುವುದಕ್ಕೆ ತೀವ್ರ ಪ್ರಯತ್ನ ಮಾಡಬೇಕು. ಮಲಪ್ರಭಾ ಯೋಜನೆಯಿಂದಲೂ ಇಲ್ಲಿ ನೀರು ಸರಬರಾಜು ಮಾಡ ಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೨೩-೧೦-೧೯೮೬ ರಂದು ಮಾನ್ಯ ಮುಖ್ಯ ಮಂತ್ರಿಗಳು ಸಭೆ ನಡೆಸಿ ಕೆಲವು ತೀರ್ಮಾನ ತೆಗೆದುಕೊಂಡಿದ್ದಾರೆ. ಮುಖ್ಯವಾದ ತೀರ್ಮಾನವೆಂದರೆ, ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು, ೨೭೫ ಬೋರ್‌ವೆಲ್ ಗಳನ್ನು ತೆಗೆಯಬೇಕು ಎಂದು. ತತ್ಕಾಲದಲ್ಲಿ ನೀರಿನ ಕ್ಷಾಮ ಉಂಟಾಗಿರುವುದನ್ನು ಪರಿಹರಿಸುವುದಕ್ಕೆ ಈ ತೀರ್ಮಾನವನ್ನು ಮಾಡಿದ್ದಾರೆ. ಇಲ್ಲಿ ವ್ಯಾಖ್ಯಾನ ಏನಾಗಿದೆ ಎಂದರೆ, ಧಾರವಾಡದ ಜಿಲ್ಲಾಧಿಕಾರಿಗಳು ದಿನಾಂಕ ೪-೧೨-೧೯೮೬ ರಂದು ಮೇಯರ್ ಮತ್ತು ಅಧಿಕಾರಿಗಳೊಂದಿಗೆ ಒಂದು ಸಭೆ ಮಾಡಿ ಒಂದು ತೀರ್ಮಾನ ಮಾಡಿದ್ದಾರೆ. ಅದೇನೆಂದರೆ, ಹೆಚ್ಚು ಹಣವನ್ನು ಸರ್ಕಾರದಿಂದ ಸಾಲವಾಗಿ ಪಡೆದರೆ ಅದಂ ನಮ್ಮ ನಗರಪಾಲಿಕೆಗೆ ಭಾರವಾಗುತ್ತದೆ. ಆದ್ದರಿಂದ, ತಕ್ಷಣದಲ್ಲಿ ಕೊಟ್ಟಿರುವ ೪೪ ಲಕ್ಷ ರೂ.ಗಳನ್ನು ಉಪಯೋಗಿಸಿಕೊಂಡಂ ಕೊಳವೆ ಬಾವಿಗಳನ್ನು ತೋಡಿಸೋಣವೆಂದು ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನ ಮಾಡುವುದಕ್ಕೆ ಏನು ಕಾರಣ? ಮಾನ್ಯ ಮುಖ್ಯ ಮಂತ್ರಿಗಳ ಮಟ್ಟದಲ್ಲಿ ಈ ಒಂದು ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿತ್ತು. ಆ ತೀರ್ಮಾನವನ್ನು ಬದಲಾವಣೆ ಮಾಡುವುದಕ್ಕೆ ಏನು ಕಾರಣ? ಮಾನ್ಯ ಮುಖ್ಯ ಮಂತ್ರಿಗಳ ಮಟ್ಟದಲ್ಲಿ ಒಂದು ವಿಚಾರ ಸಾಕಷ್ಟು ಚರ್ಚೆಯಾಗಿ ಆ ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಇದ್ದೂ, ಜಲಮಂಡಳಿಯವರು, ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಮತ್ತು ಮಾನ್ಯ ಮೇಯರ್‌ರವರು ಸಹ ಇದ್ದು ಅವರೆಲ್ಲರ ಸಮುಖದಲ್ಲಿ ಒಂದು ಸಭೆ ನಡೆದು ಆ ಸಭೆಯಲ್ಲಿ ತೀರ್ಮಾನ ಮಾಡಿದಂತೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು ೨೭೫ ಬೋರ್‌ವೆಲ್‌ಗಳನ್ನು ತೋಡಿಸಬೇಕೆಂದು ತೀರ್ಮಾನವಾಯಿತು. ಆದಾದ ಮೇಲೆ ಎರಡೇ ತಿಂಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತೊಂದು ಸಭೆಯನ್ನು ಕರೆದು ಬರೀ ೪೫ ಲಕ್ಷ ರೂಪಾಯಿಗಳಲ್ಲಿ ಕೇವಲ ೧೩ ಬೋರ್‌ವೆಲ್‌ಗಳು ಸಾಕು ಎನ್ನುವ ತೀರ್ಮಾನಕ್ಕೆ ಬರುವುದಕ್ಕೆ ಅವರಿಗೇನು ಅಧಿಕಾರ ಇದೆ? ಈ ರೀತಿ ಮಾಡುವುದಕ್ಕೆ ಏನು ಕಾರಣ? ಇದರಿಂದ ಯಾರಿಗೆ ಯಾವ ರೀತಿಯಲ್ಲಿ ತೊಂದರೆಯಾಗಿತ್ತು. ಈ ೧೩ ಕೊಳವೆ ಬಾವಿಗಳನ್ನು ತೋಡಿಸಿದರೆ ಒಂದಂ ಕಡೆ ನೀರು ಬರುತ್ತದೆ ಇನ್ನೊಂದು ಕಡೆ ನೀರು ಬರುವುದಿಲ್ಲ. ಆಗ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ, ಜನ ರೊಚ್ಚಿಗೇಳುತ್ತಾರೆ. ಅಲ್ಲಿನ ಕಾರ್ಪೊರೇಟರ್ಸ್ ಕೂಡ ಬಿಗಿಯಾಗಿ ವರ್ತನೆ ಮಾಡಲೇಬೇಕಾಗುತ್ತದೆ. ಕೊಳವೆ ಬಾವಿಗಳನ್ನು ತೋಡುತ್ತಿದ್ದ ಯಂತ್ರಗಳನ್ನು ವಾಪಸ್ ತೆಗೆದುಕೊಂಡು ಹೋಗುವಾಗ ಆಲ್ಲಿನ ಜನ ರಸ್ತೆ ರೋಕೋ ಮಾಡಿದ್ದಾರೆ. ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳಂ ಒಂದು ಸಭೆಯನ್ನು ಕರೆದ ಅಧಿಕಾರಿಗಳ ಸಮ್ಮುಖದಲ್ಲಿ ಆದಂತಹ ಒಂದು ತೀರ್ಮಾನವನ್ನು ಬದಲಾವಣೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಏನು ಅಧಿಕಾರವಿದೆ? ಮಹಾನಗರ ಸಭೆಯ ಮೇಲಿನ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಯಿತೆಂದು ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಒಂದು ಕಡೆ ನೀರು ಕೊಟ್ಟು ಇನ್ನೊಂದಂ ಕಡೆ ನೀರು ಕೊಡಲಿಲ್ಲವೆಂದರೆ ಜನ ರೊಚ್ಚಿಗೇಳುವುದಿಲ್ಲವೇ? ಎಲ್ಲರಿಗೂ ನೀರು

ಕೊಡಬೇಡವೆ? ಒಂದು ಕಡೆ ನೀರು ಕೊಟ್ಟು ಇನ್ನೊಂದು ಕಡೆ ನೀರು ಕೊಡಲಿಲ್ಲವೆಂದರೆ ಜನ ಸಿಟ್ಟಿಗೇಳುವುದು ಸ್ವಾಭಾವಿಕ. ಆದ್ದರಿಂದ ಈ ಒಂದು ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಮಾನ್ಯ ಮುಖ್ಯ ಮಂತ್ರಿಗಳ ತೀರ್ಮಾನವನ್ನು ಬದಲಾಯಿಸುವುದಕ್ಕೆ ಕಾರಣವೇನು? ಅದಕ್ಕೇನು ಸಂದರ್ಭ ಒದಗಿ ಬಂತು? ಏತಕ್ಕಾಗಿ ಈ ರೀತಿ ಮಾಡಿದರು? ಮಾನ್ಯ ಮುಖ್ಯಮಂತ್ರಿಗಳು ಕರೆದಿದ್ದ ಸಭೆಗೆ ಬೇರೆ ಅಧಿಕಾರಿಗಳು ಯಾರೂ ಹೋಗಿರಲಿಲ್ಲವೇ? ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟರೆ ನಾವು ಆಗ ಆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಶ್ರೀ ಎ. ಎಂ. ಜಿ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ನೀರಿನ ಸಮಸ್ಯೆಯ ಬಗ್ಗೆ ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಮಹಾನಗರದಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಈ ನೀರಿನ ಸಮಸ್ಯೆ ಬಂದಾಗ ಅಲ್ಲಿನ ಅಧಿಕಾರಿಗಳು ನಾವು ಹಂತ-ಹಂತವಾಗಿ ಕುಳಿತುಕೊಂಡು ಮೀಟಿಂಗ್ ಮಾಡಿದ್ದೇವೆ. ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಬೊಮ್ಮಾಯಿಯವರಿಗೂ ಈ ವಿಚಾರ ಗೊತ್ತಿದೆ. ಮತ್ತು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ಶ್ರೀನಿವಾಸರವರು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ಮೀಟಿಂಗ್ ಮಾಡಿ ಒಂದು ಕೋಟಿ ರೂಪಾಯಿಗಳನ್ನು ಕೊಳವೆ ಬಾವಿಗಳನ್ನು ತೊಡಿಸುವುದಕ್ಕೆ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದರು. ಈ ತೀರ್ಮಾನ ಮಾಡಿದಂತಹ ಕಾಲದಲ್ಲಿ ಈ ಹಣವನ್ನು ಪರತ್ತಿನ ಮೇಲೆ ವಾಪಸ್ಸು ಕೊಡಬೇಕೆಂದು ಸಹ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಮೇಯರ್‌ರವರಿಗೆ ತಿಳಿಸಿದರು. ಆದೇ ರೀತಿಯಲ್ಲಿ ಮಾನ್ಯ ಮೇಯರ್‌ರವರು ಸುಮಾರು ೪೦ ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ವಾಪಸ್ ಮಾಡಿದ್ದಾರೆ. ಈ ಸಲುವಾಗಿ ಮಾನ್ಯ ಮೇಯರ್‌ರವರು ಸರ್ಕಾರಕ್ಕೆ ಒಂದು ಪತ್ರವನ್ನು ಸಹ ಬರೆದಿದ್ದಾರೆ. ಒಂದು ಕೋಟಿ ರೂಪಾಯಿಗಳಲ್ಲಿ ಈಗಾಗಲೇ ೪೦ ಲಕ್ಷ ರೂಪಾಯಿಗಳನ್ನು ವಾಪಸ್ ಮಾಡಿದ್ದಾರೆ. ಇನ್ನುಳಿದ ಹಣಕ್ಕೆ ಸ್ವಲ್ಪ ಸಮಯ ಕೊಡಬೇಕು, ಆ ಹಣವನ್ನು ಸಹ ನಾವು ಮರುಪಾವತಿ ಮಾಡುತ್ತೇವೆ ಎನ್ನುವ ಮಾತನ್ನು ಸಹ ಮೇಯರ್‌ರವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತೆಗೆದು ಕೊಂಡ ಒಂದು ತೀರ್ಮಾನದ ಪ್ರಕಾರ ನಮಗೆ ಒಂದು ಕೋಟಿ ರೂಪಾಯಿಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಡಲಿಲ್ಲ. ಈ ತೀರ್ಮಾನವನ್ನು ಅಲ್ಲಿ ಜಿಲ್ಲಾಧಿಕಾರಿಗಳು ಬದಲಾವಣೆ ಮಾಡಿ ಬರೀ ಳಿಗೆ ಲಕ್ಷ ರೂಪಾಯಿಗಳಲ್ಲಿ ೧೩೫ ಬೋರ್‌ವೆಲ್‌ಗಳನ್ನು ಮಾತ್ರ ಮಾಡಿಸಿದರು. ಒಂದು ಭಾಗದಲ್ಲಿ ನೀರು ಬಂದರೆ ಇನ್ನೊಂದು ಭಾಗದಲ್ಲಿ ನೀರು ಇಲ್ಲ. ಇದರಿಂದ ಜನ ರೊಚ್ಚಿಗೆದ್ದಿದ್ದಾರೆ. ಹಿಂದೆ ತೋಡಿಸಿದಂತಹ ಎಲ್ಲಾ ಬೋರ್‌ವೆಲ್‌ಗಳು ಸಹ ಈಗ ಡ್ರೈ ಆಗಿವೆ. ಅಲ್ಲಿ ನೀರೇ ಬರುವುದಿಲ್ಲ. ನಮ್ಮ ಸರ್ಕಾರಕ್ಕೆ ಬರೀ ಹೇಳುವುದಕ್ಕೆ ಮಾತ್ರ ಬಾಯಿ ಇದೆ, ಕೇಳುವುದಕ್ಕೆ ಕಿವಿ ಇಲ್ಲ. ನೋಡುವುದಕ್ಕೆ ಕಣ್ಣು ಇಲ್ಲ. ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಒಂದು ಕೋಟಿ ರೂಪಾಯಿಗಳ ಯೋಜನೆ ಏನಿದೆ ಅದನ್ನು ಈ ಕೂಡಲೇ ಬಿಡುಗಡೆ ಮಾಡಿ ಅಲ್ಲಿನ ಜನರಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್. — ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದು ನನಗನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರ ಸಭೆಯಲ್ಲಿ ತೀರ್ಮಾನವಾದ ನಿರ್ಣಯಗಳು ಹೀಗಿವೆ.

The persons who were present at the meeting :

1) The Chief Minister, (2) Minister for Revenue and Planning, 3) Minister for Industries, 4) Minister for Urban Development. Law & Parliamentary Affairs&Food and Civil Supplies, 5) Chairman, Karnataka Urban Water Supply and Drainage Board, Bangalore, 6) Commissioner & Secretary to Government, Finance Department, 7) Secretary to Government, Housing & Urban Development Department, 8) Secretary to Chief Minister, 9) Managing Director

Karnataka Urban Water Supply and Drainage Board, Bangalore, 10) Mayor of the Hubli-Dharwar Municipal Corporation, 11) Joint Secretary of Government, Planning Department, 12) Deputy Commissioner, Dharwad District and 13) Commissioner of the Hubli-Dharwar Municipal Corporation.

The following were the decisions taken :

(i) A sum of Rs. 1.00 crore might be released out of the plan allocation of the KUWS & DB for the current year to enable it to dig bore wells in the HDMC area, after ascertaining the availability of under ground water.

(ii) The HDMC should collect by 15th November, 1986 a sum of Rs. 80.00 lakhs out of arrears due to it towards property taxes and another sum of Rs. 60.00 lakhs by the end of December, 1986 and transfer the same to the KUWS & DB, towards its dues to the Board for utilising the same for plan works.

(iii) The Deputy Commissioner, Dharwad District would collect as promised by him by way of small savings Rs. 5.00 crores (Net) more, over and above the target already fixed and that Government would release out of the sum to be so collected, sum of Rs. 2.00 crores to the HDMC as loan.

ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಅನುಸಾರವಾಗಿ ಸರ್ಕಾರ ತನ್ನ ಆಜ್ಞೆಯನ್ನು ದಿನಾಂಕ ೧೮-೧೧-೧೯೮೬ರಲ್ಲಿ ಹೊರಡಿಸಿದೆ. ಸರ್ಕಾರ ಹಣ ರಿಲೀಸ್ ಮಾಡಿದ್ದು ೨೭-೧೧-೧೯೮೬ರಲ್ಲಿ. ಈ ಮಧ್ಯೆ ಏನಾಗಿದೆ ಎಂದರೆ, ಡೆಪ್ಯೂಟಿ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ ೪-೧೨-೧೯೮೬ರಲ್ಲಿ ಒಂದು ಸಭೆ ಮಾಡಿದ್ದಾರೆ. ಅದಕ್ಕೂ ಮೊದಲು ಅಂದರೆ ೧೮-೧೧-೧೯೮೬ರಲ್ಲಿ ಒಂದು ಸಭೆ ಮಾಡಿ ಅದರ ಬಗ್ಗೆ ಒಂದು ಪತ್ರವನ್ನು ಅಲ್ಲಿನ ಮಹಾ ಪೌರರು ಅಂದರೆ ಮೇಯರ್‌ರವರು ಬರೆದಿದ್ದಾರೆ. ನನಗೂ ಅದರ ಒಂದು ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಇದರ ಜೊತೆಗೆ ನಮ್ಮ ಕರ್ನಾಟಕ ನೀರು ಸರಬರಾಜು ಅಧ್ಯಕ್ಷರಿಗೂ ಒಂದು ಕಾಗದವನ್ನು ಬರೆದಿದ್ದಾರೆ.

ಆ ಕಾಗದದಲ್ಲಿ ಏನಿದೆ ಎಂದರೆ. . .

ದಿನಾಂಕ ೨೩-೧೧-೧೯೮೬ರಂದು ಸನ್ಮಾನ್ಯ ಮುಖ್ಯಮಂತ್ರಿಯವರೊಡನೆ ಸದನದ ಸಮಾಲೋಚನೆಯನ್ವಯ ಈ ಮಹಾನಗರ ಸಭೆಗೆ ತಾವು ರೂ. ೧೦೦ ಲಕ್ಷಗಳಷ್ಟು ಧನಸಹಾಯವನ್ನು ಸಾಲರೂಪದಲ್ಲಿ ಬಿಡುಗಡೆ ಮಾಡಿದ್ದಕ್ಕೆ ತಮಗೆ ಧನ್ಯವಾದಗಳು. ಮೇಲ್ಕಾಣಿಸಿದ ಉಲ್ಲೇಖನವು ದಿನಾಂಕ ೨೪-೧೧-೧೯೮೬ರಂದು ನಮ್ಮ ಕೈಸೇರಿದ್ದು. ಅದರನ್ವಯ ಮಹಾನಗರ ಸಭೆಯು ನವೆಂಬರ್ ೮೬ರ ಕೊನೆಗೆ ರೂ. ೮೦ ಲಕ್ಷ ಹಾಗೂ ಡಿಸೆಂಬರ್ ೮೬ರ ಕೊನೆಗೆ ರೂ. ೨೦ ಲಕ್ಷ ಈ ರೀತಿ ಸದರಿ ಸಾಲದ ಮರುಪಾವತಿಯನ್ನು ಮಾಡಬೇಕು. ಆದರೆ ದಿನಾಂಕ ೨೩-೧೧-೧೯೮೬ರಂದು ನಿರ್ಧರಿಸಲಾದ ಧನಸಹಾಯದ ಆಜ್ಞೆ ದಿನಾಂಕ ೨೪-೧೧-೧೯೮೬ರಂದು ಬಂದದ್ದರಿಂದ ಈ ಸಹಾಯದ ಸದುಪಯೋಗ ಇಷ್ಟೊಂದು ಶೀಘ್ರವಾಗಿ ಮಾಡಲು ಆಗಿಲ್ಲ. ಈ ಧನಸಹಾಯವು ಸಾಲದ ರೂಪದಲ್ಲಿದ್ದು ಅದನ್ನು ಮರುಪಾವತಿ ಮಾಡುವುದು ಎರಡೇ ಕಂತುಗಳಲ್ಲಿ ಸಾಧ್ಯವಾಗದು. ಸದರಿ ಕೊಳವೆ ಬಾವಿಗಳ ಕೆಲಸವನ್ನು ಮೊದಲು ಯೋಚಿಸಿದಂತೆ ಅಂದರೆ ೨೬೫ ಕೊಳವೆ ಬಾವಿಗಳನ್ನು ತೋಡದೇ ಮೊದಲನೆಯ ಹಂತವಾಗಿ ೧೩೬ ಮಾತ್ರ ತೋಡಲಾಗುತ್ತಿದ್ದು ಅವುಗಳಲ್ಲಿ ಜಲಸಾಮರ್ಥ್ಯ ಗಮನಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿರುವ ಮಹಾನಗರ ಸಭೆಯು ಸದರಿ ಧನಸಹಾಯವನ್ನು ಕೂಡ ಆದಷ್ಟು ಕಡಿಮೆ ಪ್ರಮಾಣದಲ್ಲಿ ಅಂದರೆ, ಪ್ರತಿಶತ ೪೫ರಷ್ಟು ಮಾತ್ರ ವಿನಿಯೋಗಿಸಿ ಅದನ್ನು ಆದಷ್ಟು ಬೇಗನೆ ಮರುಪಾವತಿ ಮಾಡಬೇಕೆಂದು ಯೋಜಿಸಲಾಗಿದೆ. ಸದರಿ ಕೆಲಸವು ಸಂಪೂರ್ಣ ಮುಗಿದು ನೀರು ಪೂರೈಕೆ ಕಾರ್ಯಾಚರಣೆಗೆ ಬದಲು ಇನ್ನೂ ಸುಮಾರು ಆರು ವಾರಗಳಷ್ಟು ಸಮಯ ಹಿಡಿಯಬಹುದು. ಆದ್ದರಿಂದ ಈ ಕೆಲಸದ ಬಗ್ಗೆ ಆಗುವ ವ್ಯಯದ ಸಂಪೂರ್ಣ ಮಾಹಿತಿ ನಮಗೆ ಜನವರಿ ೧೯೮೭ರ ಕೊನೆಗೆ ಕೈ ಸೇರಬಹುದು.

ಸನ್ಮಾನ್ಯ ಅಧ್ಯಕ್ಷರೇ, ಇದು ಮೇಯರ್‌ರವರು ಬರೆದಿರತಕ್ಕಂತ ಪತ್ರ. ಇದಾದಮೇಲೆ ೪-೧೨-೧೯೮೬ರಲ್ಲಿ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಮಾನ್ಯ ಮೇಯರ್‌ರವರು ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯ ಅಧಿಕಾರಿಗಳು, ಕಮೀಶನರ್‌ರವರು ಸೇರಿಕೊಂಡು ಒಂದು ನಿರ್ಣಯ ಮಾಡಿದರು. ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಮಹಾನಗರ ಸಭೆಯು ಮೇಲ್ಕಾಣಿಸಿದ ಭಾರವನ್ನು ಕಡಿಮೆ ಮಾಡಿಕೊಳ್ಳುವ ದೃಷ್ಟಿಯಿಂದ ಒಟ್ಟು ಕೆಳಪೆ ಬಾವಿಗಳಿಗೆ ಹಾಗೂ ಪಂಪುಗಳಿಗೆ ಸೇರಿ ರೂಪಾಯಿ ೪೦ ಲಕ್ಷಗಳನ್ನು ಖರ್ಚು ಮಾಡಬಹುದು. ಎರಡನೆಯದಾಗಿ, ಅವರು ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಇಲ್ಲಿ ಓದಿಂತ್ತೇನೆ ಪೂಜ್ಯ ಮಹಾಪೌರರು ಕೊಟ್ಟ ಯಾದಿಯಲ್ಲಿಯ ಸಕಲ ಕೊಳವೆಬಾವಿಗಳನ್ನು ತೋಡಿಸುವ ಹಾಗೂ ಅವುಗಳಿಗೆ ಕೈಪಂಪು ಕೂಡ್ರಿಸುವ ಕೆಲಸಗಳನ್ನು ಜಲಮಂಡಳಿಯವರು ೬-ವಾರ (೪೨ ದಿನಗಳಲ್ಲಿ) ಗಳಲ್ಲಿ ಮುಗಿಸಬೇಕು, ಹಾಗೆಯೇ ೪-೧೨-೧೯೮೬ರಲ್ಲಿ ಬರೆದ ಪತ್ರದಲ್ಲಿ ಮಲಪ್ರಭಾ ನೀರನ್ನು ಕಣವಿ ಹೊನ್ನಾಪುರ ಮಾರ್ಗವಾಗಿ ಹುಬ್ಬಳ್ಳಿಗೆ ಸಾಗಿಸುವ ಸಲುವಾಗಿ ಈಗಿದ್ದ ನೀರಿನ ಕೊಳವೆಗೆ ಸೂಕ್ತ ಬದಲಾವಣೆ ಮಾಡುವ ಕೆಲಸಗಳನ್ನು ಜಲಮಂಡಳಿಯವರು ಮುಗಿಸಬೇಕು. ಹೀಗೆ ಇದೆ. ಇನ್ನುಳಿದ ವಿಚಾರಗಳನ್ನು ಆಮೇಲೆ ಹೇಳುತ್ತೇನೆ. ಜನವರಿ ಕೊನೆ ಹೊತ್ತಿಗೆ ೧೧೭ ಕೊಳವೆಬಾವಿಗಳನ್ನು ಜಲಮಂಡಳಿಯವರು ಕೊರೆದಿದ್ದಾರೆ. ಇದರಲ್ಲಿ ವಿಳಂಬವಾಗಿಲ್ಲ. ಮಹಾಪೌರರ ಮತ್ತು ಆಯುಕ್ತರ ಬೇಡಿಕೆಯ ಪ್ರಕಾರ ಜಾಸ್ತಿ ಸಾಲ ಖರ್ಚು ಮಾಡತಕ್ಕಂಥಾದ್ದು ಬೇಡ ಎಂದು ಹೇಳಿದರಂ.

ಸನ್ಮಾನ್ಯ ಶ್ರೀನಿವಾಸ್‌ರವರು ಕೇಳಿದರು, ಈ ವಿಚಾರದಲ್ಲಿ ಅವರಿಗೆ ಅಧಿಕಾರ ಏನಂ ಇದೆ ಎಂದು. ಯಾರಿಗೋಸ್ಕರವಾಗಿ ಕೊಳವೆಬಾವಿಗಳನ್ನು ಕೊರೆಯುವುದಕ್ಕೆ, ಹಣವನ್ನು ಮಂಜೂರು ಮಾಡುವುದಕ್ಕೆ ಒಪ್ಪಿಕೊಂಡಿದ್ದರೋ, ಯಾರಿಗೆ ಹಣವನ್ನು ಮಂಜೂರು ಮಾಡಿದ್ದರೋ ಅವರೇ ನಮಗೆ ೨೭೫ ಬೇಡ, ೧೩೫ ಸಾಕು, ಸಾಲ ಜಾಸ್ತಿ ಆಗುತ್ತದೆ ಎನ್ನುವುದನ್ನು ಪತ್ರ ಮುಖೇನ ಸರಕಾರಕ್ಕೆ ಮನವಿ ಮಾಡಿಕೊಂಡ ಮೇಲೆ ಈ ಕೆಲಸವನ್ನು ಮಾಡಿದ್ದೇವೆ. ಆದಾದಮೇಲೆ, ಕಮೀಶನರ್‌ರವರು ಬೆಂಗಳೂರಿಗೆ ಬಂದು ನಮ್ಮ ಎಂ. ಡಿ. ಯವರನ್ನು ಭೇಟಿ ಮಾಡಿ ನಮ್ಮ ನೀರಿನ ಈಲ್ಡ್ ಎಷ್ಟಿದೆ. ಆದನ್ನು ಗಮನದಲ್ಲಿಟ್ಟುಕೊಂಡು, ಕೊಳವೆಬಾವಿಗಳ ಸಂಖ್ಯೆಯನ್ನು ಹೆಚ್ಚುಕಡಿಮೆ ಮಾಡತಕ್ಕದ್ದನ್ನು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅವರ ಒಂದು ಮನವಿ ಮೇಲೆ ಆದರ ಸಂಖ್ಯೆಯನ್ನು ಕಡಿಮೆ ಮಾಡಿದ್ದೇವೆ. ೧೩೧ ಕೊಳವೆ ಬಾವಿಗಳನ್ನು ಮಾಡಿದ್ದಾಗಿದೆ. ಇನ್ನು ಕೆಲವು ಮಾಡಬೇಕಾದಂತಹವುಗಳು ಇವೆ ಈ ತಿಂಗಳೊಳಗಾಗಿ ಅವುಗಳನ್ನು ಮಾಡುತ್ತೇವೆ. ಆದುದರಿಂದ ಇದರಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಈ ವಿಚಾರದಲ್ಲಿ ನಾನು ಹೇಳತಕ್ಕಂಥಾದ್ದು ಇಷ್ಟೆ.

ಇನ್ನು ಮಾನ್ಯ ಎಂ. ಎಸ್. ಕೃಷ್ಣಸ್ವಾಮಿಯವರು ಸಾರಾಸಗಟಾಗಿ, ಸರಕಾರ ಏನೂ ಮಾಡಿಲ್ಲ. ಯಾವುದೇ ಪರ್ಮಾನೆಂಟ್ ವ್ಯವಸ್ಥೆಯನ್ನು ಮಾಡಿಲ್ಲ. ಇತ್ಯಾದಿಯಾಗಿ ಆಪಾದನೆ ಮಾಡಿದ್ದಾರೆ, ನಾನು ಬಹಳ ಸೂಕ್ಷ್ಮವಾಗಿ, ಸ್ಥೂಲವಾಗಿ ಅವರ ಗಮನಕ್ಕೆ ತರಬಯಸುತ್ತೇನೆ. ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಪ್ರದೇಶದಲ್ಲಿರತಕ್ಕಂಥ ಜನರಿಗೆ ನೀರಿನ ತೊಂದರೆ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ೭-೮-೧೯೮೬ ರಂದು ಮುಖ್ಯ ಕಾರ್ಯದರ್ಶಿಯವರ ಸಮ್ಮುಖದಲ್ಲಿ ಆಗಿರತಕ್ಕಂಥ ತೀರ್ಮಾನವು ಹೀಗೆ ಇದೆ.

The filters at Unkal have been reconditioned and put to service on 30-11-1986 at a cost of Rs. 50,000 This has enabled for pumping of 5.00 lakh gallons daily to Hubli-

ಆದನ್ನು ನಿಲ್ಲಿಸಿಬಿಟ್ಟಿದ್ದರು. ನಾನು ಹೋಗಿ, ಆದನ್ನು ರಿಪೇರಿ ಮಾಡಿಸಿ, ಮೆಂಶಿನ್‌ಗಳಿಗೆ ಗ್ರೀಸ್, ಎಣ್ಣೆ, ಸುಣ್ಣ ಬಣ್ಣ ಇತ್ಯಾದಿಗಳನ್ನು ಹಾಕಿಸುವ ವ್ಯವಸ್ಥೆ ಮಾಡಿಸಿದ್ದೇನೆ. ಈಗ ಅಲ್ಲಿ ನೀರು ಬರುವುದಕ್ಕೆ ಸಾಧ್ಯವಾಗಿದೆ. ...

ಶ್ರೀ ಹಿಂಡಸಗೇರಿ.—ಅಧ್ಯಕ್ಷರೇ... ಮಂತ್ರಿಯವರು ಯಾವಾಗ ಬಂದಿದ್ದರು?

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಬೇಕು. ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ, ಆಮೇಲೆ ಬೇಕಾದರೆ ಮಾತನಾಡಬಹುದು.....

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ವಿವರಗಳು ವಿಚಾರಕ್ಕೆ ಸಂಬಂಧಪಟ್ಟವುಗಳಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳುತ್ತೇನೆ, ಕೇಳಬೇಕು.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು... ತಾವುಗಳು ಹೀಗೆ ಮಧ್ಯಪ್ರವೇಶಿಸಿ ಮಾತನಾಡಿದರೆ, ಬೇರೆ ವಿಷಯಕ್ಕೆ ಹೋಗಬೇಕಾಗುತ್ತದೆ, ಮಂತ್ರಿಯವರಿಗೆ ಉತ್ತರಿಸಲು ಅವಕಾಶ ಮಾಡಿಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಏನೂ ಮಾಡಿಲ್ಲ ಎಂದು ಹೇಳಿದರು, ಇಲ್ಲದಿದ್ದಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಅದು ರೆಕಾರ್ಡ್‌ಗೆ ಹೋಗಿದೆ.

ಅಧ್ಯಕ್ಷರು —ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.....

12-30 P.M.

SRI A. LAKSHMISAGAR.—The neck-rings of the pumping machinery at pumping station No. 2, Soundatti has been replaced at a cost of Rs. 3.00 lakhs on 10-1-87. This has enabled for pumping of 8 M G. D. from Malaprabha water supply system.

"Instead of installing booster pumps at suitable points in distribution system at Hubli, the raising main from Kanvihonnapur to Sapthapur at Dharwar has been converted into a gravity main at a cost of Rs. 5.00 lakhs and work completed on 8-1-87. This has enabled for diverting about 17 to 18 lakh gallons additional from the Malaprabha system to Hubli."

ಇದರ ಜೊತೆಗೆ 2 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರಸಭೆಗೆ ಈಗಿರುವ ನೀರನ್ನು ಬಳಸಿಕೊಂಡು ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಈಗಾಗಲೇ ಕ್ರಮ ಜರುಗಿದೆ, ಕೆಲಸ ನಡೆದಿದೆ, ಆದ್ದರಿಂದ ಏನೂ ಮಾಡಿಲ್ಲ ಎನ್ನುವುದು ವಾಸ್ತವಾಂಶವಲ್ಲ. ಆಪಾದನೆಯು ಸತ್ಯಾಂಶದಿಂದ ಕೂಡಿದ್ದಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನೀರಿನ ಬವಣೆ ಇದೆ, ಇಲ್ಲ ಎನ್ನುವುದಿಲ್ಲ. ಅದಕ್ಕೆ ಮುಖ್ಯ ಕಾರಣ ನೀರಾಗರದಲ್ಲಿ ನೀರು ಸಿಗುತ್ತಿಲ್ಲ. ಇರುವ ನೀರನ್ನೇ ಹೇಗೋ ನಗರಗಳಿಗೆ ಪಂಪ್ ಮಾಡಿಸಲಾಗುತ್ತಿದೆ. ಮಳೆಯೂ ಕಡಿಮೆಯಾಗಿದೆ, ಈ ಸಂದರ್ಭದಲ್ಲಿ ೧೩೦ ಕೊಳವೆ ಬಾವಿ ತೆಗೆಸಿ ಹೆಚ್ಚಿನ ನೀರನ್ನು ಪಡೆಯುತ್ತಿದ್ದೇವೆ. ಹಣ ಕೊಡುವವರು ಅವರು, ಸಾಲ ತೆಗೆದುಕೊಳ್ಳುವವರೂ ಅವರೇ. ಅವರೇ ಬೇಡ ಎಂದರೆ ನಾನು ಏನು ಮಾಡಲಿ? ಇದು ಪರಿಸ್ಥಿತಿ. ನಾನು ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಮಿತ್ರರಲ್ಲಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ, ಅವರಿಗೇನಾದರೂ ತೊಂದರೆ ಇದ್ದರೆ ಸರ್ಕಾರಕ್ಕೆ. ನನಗೆ ತಿಳಿಸಬಹುದಿತ್ತು ನಾನು ಸರಿಪಡಿಸುತ್ತಿದ್ದೆ. ಅಂಕಿ ಅಂಶಗಳನ್ನು ಹೇಳಲು ಅವರಿಗೆ ಅವಕಾಶ ಸಿಗಲಿಲ್ಲ ಎಂದು ಹೇಳಿ

ಕೊಂಡಿದ್ದಾರೆ. ಆದ್ದರಿಂದ ನಾನು ಹೇಳುವುದು ಇಷ್ಟೆ, ನಮ್ಮ ಕಡೆಯಿಂದ ಈ ಕೆಲಸ ಮಾಡುವುದರಲ್ಲಿ ಹೆಚ್ಚು ಕಡಿಮೆ ಆಗಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಇದು ಮುಗಿಯಿತು. ಈಗ ಖಿರ್ಗಿಯವರದು.

(ಗದ್ದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇವರು ಹೇಳುವ ಕಾರಣಗಳು ಸರಿಯಾದ್ದಲ್ಲ. ಇವರು ಮೇಯರ್ ಅವರನ್ನೇ ಕರೆಸಿ ಮಾತನಾಡಬಹುದಿತ್ತು. ಜಿಲ್ಲಾಧಿಕಾರಿಗಳು ಮತ್ತಿನ್ಯಾರೋ ಸೇರಿ ಮಂತ್ರಿಗಳಿಂದ ಈ ಹೇಳಿಕೆ ಹೇಳಿಸಿದ್ದಾರೆ ಅಷ್ಟೆ.

ಶ್ರೀ ಎಂ.ಎಸ್. ಕೃಷ್ಣನ್.—ಧಾರವಾಡ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಮರ್ಪಕ ವ್ಯವಸ್ಥೆ ಮಾಡುವುದಾಗಿ ಮಂತ್ರಿಗಳು ಹೇಳಿದರು. ಆ ಬಗ್ಗೆ ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳಿ. ಬದಲಿಗೆ ಅವರು ಹೇಳಿದ್ದನ್ನೇ ನೀವೂ ಹೇಳಿದರೆ ಉಪಯೋಗವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರು ಒದಗಿಸುವ ದೃಷ್ಟಿಯಿಂದ ಮುಖ್ಯ ಮಂತ್ರಿಗಳ ನಿಧಿಯಿಂದ ೩೫ ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಆ ನಗರಪಾಲಿಕೆಯ ಆರ್ಥಿಕ ಸ್ಥಿತಿ ಸರಿಯಾಗಿಲ್ಲ ಎಂಬ ಕಾರಣದಿಂದ ಕೆಲವು ಕೊಳವೆ ಬಾವಿಗಳನ್ನು ಕಡಿಮೆ ಮಾಡಲಾಗಿದೆ ಎಂದು ಮೇಯರ್ ಅವರು ಪತ್ರ ಬರೆದಿದ್ದಾರೆ. ಕೊಳವೆ ಬಾವಿ ತೆಗೆದಿರುವುದೂ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಟ್ಟ ಹಣದಿಂದಲೆ. ಸೌಂದತ್ತಿಯಲ್ಲಿ ನೆಟ್ ರಿಂಗ್ಸ್ ಎಲ್ಲಾ ಸವೆದು ಹೋಗಿತ್ತು. ಕಾರ್ಪೊರೇಷನ್ ಹಣ ಕೊಟ್ಟ ಮೇಲೆ ೨೫ ಲಕ್ಷ ಗ್ಯಾಲನ್ ನೀರು ಹೆಚ್ಚು ಬರುತ್ತಿದೆ. ಆದನ್ನು ಕಣಿವೆ ಹೊನ್ನಾಪುರದಿಂದ ಹಳೇ ಹುಬ್ಬಳ್ಳಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಮಲಪ್ರಭಾದ ನೀರು ಅರ್ಧ ಹುಬ್ಬಳ್ಳಿಗೆ ಬರುವುದಿಲ್ಲ. ನನ್ನ ಜೊತೆಯಲ್ಲಿ ಮಾನ್ಯ ಹಿಂದಸಗೇರಿಯವರನ್ನೂ ಕೂಡ ಕರೆದುಕೊಂಡು ಹೋಗಿದ್ದೇನೆ. ನೀರ ಸಾಗರ ಭಾಗದಲ್ಲಿ ಕೊಳವೆಬಾವಿಗಳನ್ನು ಹೆಚ್ಚು ಮಾಡತಕ್ಕಂತಹ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಮಲಪ್ರಭಾದಿಂದ ಕೆಲವು ಕಡೆ ಮಾತ್ರ ನೀರು ಒದಗಿಸಲಿಕ್ಕೆ ಸಾಧ್ಯ. ಎಲ್ಲಾ ಕಡೆಗೆ ಒದಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ೩೫ ಲಕ್ಷ ರೂಪಾಯಿಗಳು ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ಬಂದಿದ್ದು ಎಲ್ಲಿ ನೀರಸಾಗರ ಬತ್ತಿದೆ ಅಲ್ಲಿ ೭೫ ರಷ್ಟು ಕೊಳವೆ ಬಾವಿಗಳನ್ನು ಹಾಕಿದ್ದೇವೆ. ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಕೊಳವೆ ಬಾವಿಗಳನ್ನು ಹಾಕಿದ್ದೇವೆ. ತೊಂದರೆ ಎಲ್ಲಿ ಬಂದಿದೆ ಎಂದರೆ ಕೆಲವು ಕಡೆ ಕೈ ಪಂಪ್ ಹಾಕತಕ್ಕಂಥದ್ದನ್ನು ನಿಲ್ಲಿಸಲಾಗಿತ್ತು. ಈಗ ಅಂಥ ಕಡೆ ಕೂಡಲೇ ಮಾಡಲಿಕ್ಕೆ ಆದೇಶ ಕೊಡಲಾಗಿದೆ.

ಶ್ರೀ ಎ.ಎಂ ಜಿ. ಹಿಂದಸಗೇರಿ.—ಮಾನ್ಯ ಅಧ್ಯಕ್ಷರೇ, ೭ ಕೋಟಿ ರೂಪಾಯಿ .....

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ ಅರ್ಧ ಗಂಟೆಯಾಗಿದೆ, ಇನ್ನು ಅರ್ಧ ನಿಮಿಷವೂ ಕೂಡ ಅವಕಾಶ ಕೊಡುವುದಿಲ್ಲ. ಮಾನ್ಯ ಖಿರ್ಗಿಯವರೇ ತಾವು ಪ್ರಾರಂಭ ಮಾಡಿ. ಈ ಚರ್ಚೆ ಇಲ್ಲಿಗೇ ಮುಕ್ತಾಯವಾಯಿತು.

೨) ಗುಲ್ಬರ್ಗಾ ಹೊರ ವಲಯದಲ್ಲಿ ವಾಸಿಸುವ ಮುಖ್ಯ ಕೃಷಿ ಅಧಿಕಾರಿಯವರ ಮೇಲೆ ದರೋಡೆ ಕೋರರು ಹಲ್ಲೆ ನಡೆಸಿದ ಬಗ್ಗೆ.

SRI MALLIKARJUNA M. KHARGE (Gurumitkal).- Sir, I call the attention of the Minister for Home to the dacoity that took place on 4-3-1987 at Godutayee Extension in Gulbarga City.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಒಂದು ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಾಂಕ ೪/೫-೩-೧೯೮೭ ರಂದು ಮಧ್ಯ ರಾತ್ರಿ ೧.೪೫ ಗಂಟೆಯ ಸಮಯದಲ್ಲಿ ಗುಲ್ಬರ್ಗಾ ಹೊರ ವಲಯದಲ್ಲಿ ವಾಸಿಸುವ ಮುಖ್ಯ ಕೃಷಿ ಅಧಿಕಾರಿಯಾದ ಶ್ರೀ ಪ್ರಹ್ಲಾದರಾವ್ ರವರ ಮೇಲೆ